ಅಸಲು ದಾವೆ ನಂ.ಃ115/2014
ಪಿಡಬ್ಲ್ಯೂ - 1

ದಿನಾಂಕ 03-12-2019 ರಂದು ಪುನಃ ಸಾಕ್ಷಿಗೆ ಕರೆಸಿ ಪ್ರತಿಜ್ಞಾವಿಧಿ ಬೋಧಿಸಲಾಯಿತು.

**ಪಾಟೀ ಸವಾಲುಃ 8 ನೇ ಪ್ರತಿವಾದಿಯ ಪರ ಶ್ರೀ ಬಿ.ಜಿ ವಕೀಲರಿಂದ.**

ನನ್ನ ತಂದೆ 1990 ನೇ ಇಸವಿಯಲ್ಲಿ ತೀರಿಕೊಂಡಿದ್ದಾರೆ ಎಂದರೆ ಸರಿ. ಶಹಬಾದ ಪಟ್ಟಣದಲ್ಲಿ ನನ್ನ ತಂದೆ ಹೆಸರಿನಲ್ಲಿ ಸರ್ವೆ ನಂಬರ 163 ರಲ್ಲಿ 9 ಎಕರೆ ಜಮೀನು ಇತ್ತು ಎಂದರೆ ಸರಿ. ನಾನು ಮತ್ತು ಎಲ್ಲಾ ಪ್ರತಿವಾದಿಯರು ಸೇರಿ 9 ಎಕರೆಯಲ್ಲಿ 7 ಎಕರೆ ಮಾರಿದ್ದೇವೆ ಎಂದರೆ ಸರಿ, ಇನ್ನೂ 2 ಎಕರೆ ನಮಗೆ ಸೇರಿದ ಜಮೀನು ಶಹಬಾದದಲ್ಲಿ ಇದೆ ಎಂದರೆ ಸರಿ. ನಮ್ಮ ತಂದೆ ತೀರಿಕೊಂಡ ನಂತರ ನಾನು ಮತ್ತು ಪ್ರತಿವಾದಿಯರೆಲ್ಲರೂ ಒಂದೇ ಮನೆಯಲ್ಲಿ ವಾಸ ಮಾಡುತ್ತಿದ್ದೇವೆ ಎಂದರೆ ಸರಿ. ನಾನು ಮತ್ತು ಇತರ ಪ್ರತಿವಾದಿಯರು ಸೇರಿ ಒಂದು ಕಿರಾಣ ಅಂಗಡಿ ಮತ್ತು ಭಾರತ ಹೆಸರಿನ ವಿಡಿಯೋ ಥಿಯೇಟರ್ ನಡೆಸುತ್ತಿದ್ದೇವೆ ಎಂದರೆ ಸರಿ. ಉಳಿದ ದಾವಾ ಆಸ್ತಿಗಳು ನಾನು ಮತ್ತು ನಮ್ಮ ಅಣ್ಣ-ತಮ್ಮಂದಿರು ಕೂಡಿ ಖರೀದಿ ಮಾಡಿದ್ದೇವೆ ಎಂದರೆ ಸರಿ. ನನ್ನ ತಾಯಿ ಮತ್ತು ನನ್ನ ಹಿರಿಯ ಅಣ್ಣ ಅಂದರೆ 8 ಮತ್ತು 9 ನೇ ಪ್ರತಿವಾದಿಯರು ನನ್ನ ಮತ್ತು ಇತರ ಅಣ್ಣ-ತಮ್ಮಂದಿರ ಸಮ್ಮತಿ ತೆಗೆದುಕೊಂಡು ನಮ್ಮ ಕುಟುಂಬದ ಕೆಲವು ಜಮೀನು ಮಾರಿದ್ದಾರೆ ಎಂದರೆ ಸರಿ. ನಮ್ಮ ಮನೆತನದ ಕುಟುಂಬದ ಎಲ್ಲಾ ಆಗು ಹೋಗುಗಳನ್ನು 8 ನೇ ಪ್ರತಿವಾದಿ ನೋಡಿಕೊಂಡು ಹೋಗುತ್ತಿದ್ದ ಎಂದರೆ ಸರಿ. 8 ನೇ ಪ್ರತಿವಾದಿ ಕುಟುಂಬದ ವ್ಯವಹಾರದ ಸಲುವಾಗಿ ಕೆಜಿಬಿ ಬ್ಯಾಂಕ್ ಜೇವರ್ಗಿಯಲ್ಲಿ ಲೋನ ತೆಗೆದುಕೊಂಡಿದ್ದಾನೆ ಎಂದರೆ ಸರಿ. ಸದರಿ ಲೋನ ಹಣದಿಂದ ಥಿಯೇಟರ್‌ಗೆ ಅಗತ್ಯ ಸಾಮಾನುಗಳು ಮತ್ತು ಕಿರಾಣಿ ಅಂಗಡಿಯ ಸಾಮಾನುಗಳನ್ನು ಖರೀದಿ ಮಾಡಿದ್ದ ಎಂದರೆ ಸರಿ. ನಾನಾಗಲೀ ಅಥವಾ ಇತರ ಅಣ್ಣ-ತಮ್ಮಂದಿರಾಗಲೀ ವ್ಯವಹಾರದ ಸಲುವಾಗಿ 8 ನೇ ಪ್ರತಿವಾದಿಗೆ ಹಣ ಕೊಟ್ಟಿಲ್ಲ. ನಮ್ಮ ಥಿಯೇಟರ್‌ನ ಮೇಲೆ ಕೆಲವು ಕ್ರಿಮಿನಲ್ ಪ್ರಕರಣಗಳು ಇದ್ದವು ಎಂದರೆ ಸರಿ ಆ ಪ್ರಕರಣಗಳನ್ನು 8 ನೇ ಪ್ರತಿವಾದಿ ನೋಡಿಕೊಂಡು ಹೋಗುತ್ತಿದ್ದ ಎಂದರೆ ಸರಿ. ದಾವಾ ಅನುಸೂಚಿಯ 1 ಮತ್ತು 2 ನೇ ಆಸ್ತಿಯನ್ನು ಲಿಖಿತ ದಾನ ಪತ್ರದ ಮುಖಾಂತರ ನಾನು ಮತ್ತು ಇತರ ಪ್ರತಿವಾದಿಯರು 8 ನೇ ಪ್ರತಿವಾದಿಗೆ ಬಿಟ್ಟು ಕೊಟ್‌ಟಿದ್ದೇವೆ ಎಂದರೆ ಸರಿ. ದಾನ ಮಾಡುವುದಕ್ಕಿಂತ ಮೊದಲು ಸದರಿ ಆಸ್ತಿಗಳು ಪ್ರತಿವಾದಿ 1, 2 ಮತ್ತು 4 ರವರ ಹೆಸರಿನಲ್ಲಿ ಇದ್ದವು ಎಂದರೆ ಸರಿ. ಸದರಿ ದಾನ ಪತ್ರದ ಮೆಮೊರಂಡಮ್ 2008 ನೇ

ಇಸವಿಯಲ್ಲಿ ಬರೆದುಕೊಟ್ಟಿದ್ದೇವೆ ಎಂದರೆ ಸರಿ. ಸದರಿ ದಾನ ಪತ್ರದ ಮೇಲೆ ನಾವೆಲ್ಲ ತಿಳಿದುಕೊಂಡು ಸಹಿ ಮಾಡಿದ್ದೇವೆ ಎಂದರೆ ಸರಿ. 2008 ನೇ ಇಸವಿಯಿಂದ ಆ ಆಸ್ತಿಗಳು 8 ನೇ ಪ್ರತಿವಾದಿಯ ಕಬ್ಜೆಯಲ್ಲಿವೆ ಎಂದರೆ ಸರಿ. 2008 ನೇ ಇಸವಿಯಿಂದ ನಾನು ಮತ್ತು ನಮ್ಮ ಅಣ್ಣ-ತಮ್ಮಂದಿರು ಪ್ರತ್ಯೇಕವಾಗಿ ವಾಸ ಮಾಡುತ್ತಿದ್ದೇವೆ. 8 ನೇ ಪ್ರತಿವಾದಿಗೆ ಹೆಂಡತಿ ಮಕ್ಕಳಿಲ್ಲ ಎಂದರೆ ಸರಿ. ನಮ್ಮ ತಂದೆಗೆ ಕಲಬುರಗಿಯ ಬಿದ್ದಾಪೂರ ಕಾಲೋನಿಯಲ್ಲಿ 4-601/24/72 ರಲ್ಲಿ ಪ್ಲಾಟ ನಂಬರ 72 ಅಂತಾ ಒಂದು ಆಸ್ತಿ ಇತ್ತು ಎಂದರೆ ಸರಿ. ನಮ್ಮ ತಂದೆ ತೀರಿಕೊಂಡ ನಂತರ ಆ ಪ್ಲಾಟನ್ನು 1 ನೇ ಪ್ರತಿವಾದಿ ಯಾರಿಗೂ ಗೊತ್ತಿಲ್ಲದಂತೆ ಮಾರಾಟ ಮಾಡಿದ್ದಾನೆ ಎಂದರೆ ಸರಿ. 1 ನೇ ಪ್ರತಿವಾದಿ ನಮಗೆ ಮಾರಾಟದ ಹಣ ನೀಡಿಲ್ಲ. 8 ನೇ ಪ್ರತಿವಾದಿಗೆ ಹೆಂಡತಿ ಮಕ್ಕಳಿಲ್ಲದೇ ಇರುವುದರಿಂದ ನನ್ನನ್ನು ಹಾಗೂ 9 ನೇ ಪ್ರತಿವಾದಿಯನ್ನು ಬಿಟ್ಟು ಉಳಿದ ಪ್ರತಿವಾದಿಯರೆಲ್ಲರೂ ತೊಂದರೆ ಕೊಡುತ್ತಿದ್ದಾರೆ ಎಂದರೆ ಸರಿ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ಸಾಕ್ಷಿದಾರರು ಹೇಳಿದಂತೆ ನನ್ನ ಉಕ್ತ ಲೇಖನಕ್ಕೆ ಕಂಪ್ಯೂಟರ್ ನಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ. ಹೇ.ಕೇ. ಸರಿ ಇರುತ್ತದೆ**

ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ